# ಜಿಲ್ಲಾ ಮಟ್ಟದ ಶ್ರೇಷ್ಠ ಕೃಷಿಕ – 2018

## ನಾರಾಯನ ಡಿ. ಹೆಗಡೆ

ಜಿಲ್ಲೆ : ಉತ್ತರ ಕನ್ನಡ



**ಹೆಸರು : ನಾರಾಯನ ಡಿ. ಹೆಗಡೆ**
**ಗ್ರಾಮ : ನೆಡಿಗದ್ದೆ, ಅಂತ್ರವಳ್ಳಿ ಪೋಸ್ಟ**
**ತಾಲ್ಲೂಕು: ಕುಮಟಾ**
**ಜಲ್ಲೆ : ಉತ್ತರಕನ್ನಡ**
**ಮೊಬೈಲ್ ನಂ : 8277394054 , 08386-264248**

## ವಿಶೇಷ ಸಾಧನೆಗಳು :

1. ಕ್ಷೇತ್ರವನ್ನು ಇಳಿಜಾರಿಗೆ ಅನುಗುಣವಾಗಿ ವಿಂಗಡಿಸಿ, ಸಮಪಾತಳಿ ಕೈಗೊಳ್ಳಲಾಗಿದೆ. ಕ್ಷೇತ್ರವನ್ನು ಸಮಪಾತಳಿ ಮಾಡುವುದರಿಂದ ವಿವಿಧ ಅಂತರ ಬೇಸಾಯ ಕೆಲಸಗಳು ಸುಗಮವಾಗಿ ಸಾಗುವುದಲ್ಲದೆ ಮಣ್ಣು ಮತ್ತು ನೀರಿನ ಸಂರಕ್ಷಣೆ ಸಾಧ್ಯವಾಗಿದೆ.
2. ಕ್ಷೇತ್ರದಲ್ಲಿ ಬದುಗಳನ್ನು ಅಲ್ಲಲ್ಲಿ ನಿರ್ಮಿಸಲಾಗಿದೆ. ಬದುಗಳು ಇರುವುದರಿಂದ ಮಳೆಗಾಲದಲ್ಲಿ ರಭಸದ ನೀರಿನಿಂದ ಕೊಚ್ಚಿಹೋಗುವ ಮಣ್ಣಿನ ಮೇಲ್ಪದರ (ಮೇಲ್ಮಣ್ಣು) ವನ್ನು ಸಂರಕ್ಷಿಸಿಕೊಳ್ಳಬಹುದಾಗಿದೆ.
3. ಒಟ್ಟಾರೆ 2 ಕೃಷಿಹೊಂಡಗಳನ್ನು ಸ್ವಕ್ಷೇತ್ರದಲ್ಲಿ ಅಳವಡಿಸಿಕೊಳ್ಳಬಹುದಾಗಿದೆ. ಕೃಷಿ ಹೊಂಡಗಳು 50 X 50 X 10 ಅಡಿ ವಿಸ್ತೀರ್ಣವನ್ನು ಹೊಂದಿದ್ದು ಕ್ಷೇತ್ರಕ್ಕೆ ಬೇಕಾದ ನೀರನ್ನು ಕೊಯ್ಲು ಮಾಟಲಾಗುತ್ತಿದೆ. ಇದೆ ಕೃಷಿ ಹೊಂಡಗಳಲ್ಲಿ ಮೀನುಗಳನ್ನು ಸಹ ಸಾಕಲಾಗುತ್ತಿದೆ.
4. ಜೈವಿಕ ಬದುಗಳನ್ನು ಮೇವಿನ ಹುಲ್ಲು ಗಳನ್ನು ಬೆಳಸಿ ನಿರ್ಮಿಸಲಾಗಿದೆ. ಜೈವಿಕ ಬದುಗಳ ಕಾಲಾವದಿ ಹೆಚ್ಚು ಇರುವುದಲ್ಲದೆ ಮೇವಿನ ನಿರ್ವಹಣೆಯಲ್ಲಿ ಬಹಳಷ್ಟು ಉಪಕಾರಿಯಾಗಿದೆ.
5. ಹನಿ ನೀರಾವರಿ ವ್ಯವಸ್ಥೆಯನ್ನು ತೋಟಗಾರಿಕೆ ಬೆಳೆಗಳಿಗೆ ಬೇಸಿಗೆಯಲ್ಲಿ ನೀರುಣಿಸಲು ಅಳವಡಿಸಲಾಗಿದೆ. ಕಡಿಮೆ ನೀರಿನಿಂದ ಹೆಚ್ಚಿನ ಗಿಡಗಳಿಗೆ ನೀರುಣಿಸಲು ಇದು ಸಹಕಾರಿಯಾಗಿದೆ. ಇಳಿಜಾರು ಇರುವ ತೋಟದ ಜಾಗದಲ್ಲೂ ಸಹ ನೀರಾವರಿಗೆ ಈ ಪದ್ಧತಿ ಅನುಕೂಲಕರವಾಗಿದೆ.
6. ಹನಿ ನೀರಾವರಿಯನ್ನು ಮಳೆಗಾಲದಲ್ಲಿ ಹರಿದು ಬರುವ ಹೆಚ್ಚಿನ ನೀರನ್ನು ಗದ್ದೆಗೆ ನೀರುಣಿಸಲು ಬಳಸಿಕೊಳ್ಳಲಾಗುತ್ತಿದೆ.
7. ತೋಟದ ಸುತ್ತ ಮತ್ತು ಅಡಿಕೆ ಮರಗಳ ಸಾಲಿನ ಮದ್ಯದಲ್ಲಿ ಬಸಿಗಾಲುವೆಗಳನ್ನು ವಿವಿಧ ಆಳದಲ್ಲಿ ನಿರ್ಮಿಸಿಕೊಂಡು, ಹೆಚ್ಚಿನ ನೀರನ್ನು ತೋಟದಿಂದ ಹೊರಹಾಕಲಾಗುತ್ತಿದೆ. ಬಸಿಗಾಲುವೆಗಳನ್ನು ಬೇಸಿಗೆ ಕಾಲದಲ್ಲಿ ಮತ್ತೊಮ್ಮೆ ಆಳಮಾಡಿ ಶುಚಿಗೊಳಿಸಲಾಗುತ್ತದೆ.
8. ಬಹು ಬೆಳೆಯಾಗಿ ಅಡಿಕೆ, ಕಾಳುಮೆಣಸು, ಬಾಳೆ, ಪಪ್ಪಾಯ ಮತ್ತು ತರಕಾರಿಗಳನ್ನು ಬೆಳೆಯಲಾಗುತ್ತಿದೆ.
9. ಸೂರ್ಯನ ಬೆಳಕು ಮತ್ತು ಭೂಮಿಯ ತೇವಾಂಶವನ್ನು ಸದುಪಯೋಗಪಡಿಸಿಕೊಳ್ಳಲು ಅಂತರ ಬೆಳೆಗಳನ್ನು ಅಳವಡಿಸಲಾಗಿದೆ. ಅಡಿಕೆ ಜೊತೆ ಕಾಳು ಮೆಣಸು ಮತ್ತು ಬಾಳೆಯನ್ನು ಹೊಂದಿರುತ್ತೆವೆ.
10. ದಿನ ನಿತ್ಯದ ತೋಟದ ಮತ್ತು ಮನೆಯ ಖರ್ಚಿಗೆ ಮಿಶ್ರಬೆಳೆಗಳಿಗೆ ಅವಲಂಭಿತವಾಗಿದ್ದು ತರಕಾರಿಗಳಾದ ಮೊಗ್ಗೆಕಾಯಿ, ಸೌವತೆಕಾಯಿ, ಬದನೆ ಹಾಗೂ ಹಣ್ಣಿನ ಬೆಳೆಗಳಾದ ಪಪ್ಪಾಯ ಬೆಳೆಯಲಾಗುತ್ತಿದೆ.
11. ತೋಟಗಾರಿಕೆಯಲ್ಲಿ ಅಂತರ ಬೆಳೆಪದ್ದತಿಯನ್ನು ಅನುಸರಿಸುತ್ತ, ಸಾವಯುವ ಮಾದರಿಯಲ್ಲಿ ಬೆಳೆಯನ್ನು ಬೆಳೆಯುತ್ತಿದೆ. ಸಾವಯುವ ಪದ್ದತಿಯಿಂದ ತೋಟದ ಆರೋಗ್ಯ (ಮಣ್ಣಿನ) ಕಾಪಾಡಿಕೊಳ್ಳುವುದರ ಜೊತೆಗೆ ರಾಸಾಯನಿಕ ಗೊಬ್ಬರದ ಖರ್ಚನ್ನು ಉಳಿಸಿ ಸುಸ್ಥಿರ ಇಳುವರಿ ಪಡೆಯಲಾಗುತ್ತಿದೆ.
12. ದೇಸಿ ತಳಿಯ ಹಸುಗಳನ್ನು ಸಾಕುವುದರಿಂದ ಬರುತ್ತಿರುವ ಮೂತ್ರ ಮತ್ತು ಸಗಣಿಯನ್ನು ತೋಟಕ್ಕೆ ಗೊಬ್ಬರ ಮತ್ತು ಬಯೋ ಸ್ಲರಿ ಮಾಡಲು ಅನುಕೂಲವಾಗಿದೆ.

13. ಕೃಷಿ ಅರಣ್ಯದಲ್ಲಿ ಹೆಚ್ಚಿನ ಆಸಕ್ತಿವಹಿಸಿ, ಮತ್ತಿ, ನೇರಳೆ, ಸಿಲ್ವರಗಿಡ, ಅಗರವುಡ್ ಮತ್ತು ಮಹಾಗನಿ ಬೆಳೆಯುತ್ತಿದೆನೆ ಇದೆ ಮರಗಳನ್ನು ಆಧಾರ ಮರಗಳಾಗಿ ಬಳಸಿಕೊಂಡು ಕಾಳುಮೆಣಸು ಬಳ್ಳಿಯನ್ನು ಹೆಚ್ಚಿಸುತ್ತಿದೆನೆ.
14. ಸಂಪೂರ್ಣವಾಗಿ ಸಾವಯುವ ಕೃಷಿಯಲ್ಲಿ ತೊಡಗಿಕೊಂಡು ಕೊಟ್ಟಿಗೆಯಿಂದ ಬರುವ ಗೋಮೂತ್ರ ಮತ್ತು ಸಗಣಿಯಿಂದ ಬಯೋಸ್ಲರಿ ಮಾಡಿ ಬಳಸಿಕೊಳ್ಳುತ್ತಿದೆನೆ. ಜೊತೆಗೆ ಎರೆಹುಳುಗೊಬ್ಬರ, ಹಸಿರೆಲೆಗೊಬ್ಬರ, ಕೋಳಿಗೊಬ್ಬರ ಮತ್ತು ಕುರಿಗೊಬ್ಬರ ಕೂಡ ಬಳಸಲಾಗುತ್ತಿದೆ.
15. ಜೈವಿಕ ಗೊಬ್ಬರಗಳಾದ ಅಜೆಟೊಬಕ್ಟಾರ್, ರೈಜೋಬಿಯಂ ಮತ್ತು ರಂಜಕ ಕರಗಿಸುವ ಜೀವಾಣುಗಳನ್ನು ಕೃಷಿ ಇಲಾಖೆಯಿಂದ ಪಡೆದು ಸಾವಯುವ ಕೃಷಿಯಲ್ಲಿ ಬಳಸುತ್ತಿದ್ದೆನೆ.
16. ಜೈವಿಕ ಅನಿಲ ಘಟಕ ಹೊಂದಿದ್ದು ಅದರ ಅನಿಲವನ್ನು ಅಡುಗೆ ತಯಾರಿಸಲು ಮಾಡಲು ಬಳಸಲಾಗುತ್ತಿದೆ.
17. ಟ್ರೈಕೋಪರ್ಮಾ ಮತ್ತು ಕಾಳುಮೆನಸಿನ ರೋಗಗಳ ನಿರ್ವಹಣೆಗೆ ನೇರವಾಗಿ ಭೂಮಿಗೆ ನೀಡುವುದರ ಮೂಲಕ ಮತ್ತು ಸಿಂಪರಣೆ ಮಾಡಲು ಬಳಸುತ್ತಿದ್ದೆನೆ.
18. ಹಾಲಿನ ಉತ್ತಪನ್ನಗಳು, ಹಾಲಿನಿಂದ ತುಪ್ಪ, ತಯಾರಿಸಿ ಸಣ್ಣ ಪ್ರಮಾಣದಲ್ಲಿ ಮಾರಾಟ ಮಾಡಲಾಗುತ್ತಿದೆ.
19. ಅಡಿಕೆಯನ್ನು ಸುಲಿದು, ಬೇಯಿಸಿ ಒಣಗಿಸಿ ಮಾರಾಟ ಮಾಡುವುದು.
20. ಬಾಳೆಯಿಂದ ಚಿಪ್ಸ ತಯಾರಿಸುವುದು, ಕಡಿಮೆ ಮಾರುಕಟ್ಟೆ ದರ ಇರುವ ಸಂದರ್ಭದಲ್ಲಿ ಕೋಯ್ಲೋತ್ತರ ತಂತ್ರಜ್ಞಾನಗಳು ಸಂಸ್ಕರಣೆ ಮಾಡುವುದರಿಂದ ಶೇಖರಣೆ ಮಾಡಬಹುದು ಹಾಗೂ ದರ ಹೆಚ್ಚಿದಾಗ ಮಾರಾಟಮಾಡಬಹುದು.
21. ಸುಧಾರಿತ ಕಾಳುಮೆಣಸು ತಳಿಗಳನ್ನು ಹಿಪ್ಪಲಿ ಗಿಡಕ್ಕೆ ಕಸಿ ಮಾಡಿ ವರ್ಷಕ್ಕೆ ಸುಮಾರು 1,50,000 ಕಸಿ ಗಿಡಗಳನ್ನು ಮಾರಿ 45 ಲಕ್ಷ ರೂ ಗಳಿಸುತ್ತಿರುವುದು ವಿಶೇಷಸಾಧನೆ.
22. 19 ಎಕರೆ ಹೊಲದಲ್ಲಿ ಅರಣ್ಯ ಮರಗಳ ಆದಾರಿತ ಬೆಳೆಪದ್ದತಿ ಬೆಳಿಸಿ ಅದಕ್ಕೆ ಕಾಳುಮೆಣಸು ಹಬ್ಬಿಸಿ ಅದರ ಮಧ್ಯ ಪಪಾಯ ಬೆಳೆದು 42 ಲಕ್ಷ ರೂ ಗಳಿಕೆ.
23. ಒಂದು ಗುಂಟೆ ಜಾಗದಲ್ಲಿ 1 ಕ್ವಿಂಟಾಲ್ ಕಾಳುಮೆಣಸು ಪಡೆಯುವ ಪೊದೆ ಕಾಳುಮೆಣಸಿನ ಗೋಪುರ
24. ಕಾಳುಮೆಣಸು ಬೆಳೆಗೆ ಆಧಾರವಾಗಿ ಅಡಿಕೆಯಲ್ಲದೆ ಮ್ಯೂಂಜಿಯಂ, ಸಿಲ್ವರ್‌ಹಿಲ್ ಅಂಟವಾಳ ನೇರಳೆಮರ ಮಹಾಗನಿಮರ ಇತ್ಯಾದಿ.
25. ಕಾಳುಮೆಣಸಿಗೆ ಆದಾರವಾಗಿ ಬೆಳೆಗಳಲ್ಲದೆ ಅಲ್ಯುಮಿನಿಯಂ ಪೈಪ್, ಕಂಬ ಇತ್ಯಾದಿ ಅಳವಡಿಕೆ.
26. ಕಾಳುಮೆಣಸಿನ ವಿವಿಧ ಸುಧಾರಿತ ತಳಿಗಳ ಪ್ರಾತ್ಯಕ್ಷತೆ.
27. ವಾರ್ಷಿಕವಾಗಿ ರೂ. 1,07,32,000 ಒಟ್ಟು ಆದಾಯಗಳಿಕೆ.







# ಜಿಲ್ಲಾ ಮಟ್ಟದ ಶ್ರೇಷ್ಠ ಕೃಷಿ ಮಹಿಳೆ – 2018

## ಜಿಲ್ಲೆ : ಉತ್ತರ ಕನ್ನಡ

**ಹೆಸರು** : **ಪ್ರೇಮಾ ರಮೇಶ ಬಜೇಂತ್ರಿ**
**ಗ್ರಾಮ** : **ಕೋಡಂಬಿ**
**ಪೋಸ್ಟ** : **ಪಾಳ**
**ತಾಲ್ಲೂಕು** : **ಮುಂಡಗೋಡ**
**ಜಿಲ್ಲೆ** : **ಉತ್ತರಕನ್ನಡ**
**ಮೊಬೈಲ್ ನಂ** : **9480653401**

## ವಿಶೇಷ ಸಾಧನೆಗಳು :

1. ಅವಿದ್ಯಾವಂತೆ ಇವರ ಸಮಗ್ರ ಕೃಷಿ ಪದ್ದತಿ ಅಳವಡಿಕೆಯಿಂದ ನೆಮ್ಮದಿಯ ಬದುಕು.
2. ಜಿಲ್ಲೆಯಲ್ಲಿ ಪ್ರಪ್ರಥಮ ರೇಷ್ಮೆ ಕೃಷಿ ಪ್ರಾರಂಭ ಪ್ರತಿ ಬಾರಿ 100 ಮೊಟ್ಟೆಯಂತೆ ವರ್ಷದಲ್ಲಿ 6 ಬಾರಿ ಸಾರಿ ರೂ. 2,25,000 ಗಳಿಕೆ.
3. ಕೃಷಿ ಬೆಳೆಗಳಾದ ಭತ್ತ, ಗೋವಿನಜೋಳ ಹಾಗೂ ಕಬ್ಬು ಬೆಳೆಗಳ ಅಳವಡಿಕೆ.
4. ಪ್ಲಾಂಟೀಶನ್ ತೋಟಗಾರಿಕಾ ಬೆಳೆಗಳಾಗಿ ಮಾವು, ತೆಂಗು, ಸಪೋಟ ಹಾಗೂ ಅಡಿಕೆ ಬೆಳೆಗಳು
5. ನಿರಂತರ ಹಣಕ್ಕಾಗಿ ಅರ್ಧಎಕರೆ ತರಕಾರಿ ಬೆಳೆಗಳಾದ ಬದನೆ, ಸೌವತೆಕಾಯಿ, ಹೀರೆಕಾಯಿ, ಟೋಮೆಟೊ, ಬೆಳೆದು 80 ಸಾ
6. ವಿರ ಆದಾಯಗಳಿಕೆ.
7. ಅರ್ಧ ಎಕರೆ ಬಾಳೆ ಬೆಳೆದು ರೂ. 1,50,000 ಹಣ ಸಂಪಾದನೆ
8. 10 ಗುಂಟೆ ಕೆಂಪು ಕಬ್ಬು ಬೆಳೆದು ರೂ. 60,000 ಗಳಿಸಿದ ಸಾಧಕಿ.
9. ಎಂಟು ಆಕಳು ಸಾಕಿಕೊಂಡು ವರ್ಷಕ್ಕೆ 15,000 ಲೀಟರ್ ಹಾಲು ಉತ್ಪಾದಿಸಿ ರೂ. 3,75,000 ಗಳಿಸಿರುವ ಮಹಾನ್ ಸಾಧಕಿ.
10. 50 ನಾಟಿ ಕೋಳಿ ಸಾಕಿ ತಿಂಗಳಿಗೆ ಸುಮಾರು 150 ತತ್ತಿ ಮಾರಿ ವರ್ಷಕ್ಕೆ ರೂ 10,800 ಹಾಗೂ ಕೋಳಿ ಮಾರಾಟದಿಂದ ರೂ. 7,500 ಗಳಿಕೆ.
11. ಎರಡು ಎಕರೆ ಗೋವಿನ ಜೋಳದಲ್ಲಿ 70 ಕ್ವಿಂಟಾಲ್ ಇಳುವರಿ ಪಡೆದು ರೂ. 70,000 ಆದಾಯ.
12. ಮೂರು ಕುರಿ ಸಾಕಿ ಆದ್ದರಿಂದ ರೂ. 45,000 ಹಣ ಗಳಿಕೆ.
13. ತರಕಾರಿ ಬೆಳೆಗಳಲ್ಲಿ ಪ್ಲಾಸ್ಟಿಕ್ ಹೊದಿಕೆ ತಂತ್ರಜ್ಞಾನ ಅಳವಡಿಕೆ.
14. ಬೆಳೆಗಳಿಕೆ ಹನಿ ನೀರಾವರಿ ಅಳವಡಿಕೆ ನೀರು ಉಳಿತಾಯ
15. ಕೃಷಿ ಹೊಂಡದ ನೀರಿಗೆ ಜೀವರಸಾಯನ ( Biodigester extract )ಸೇರಿಸಿ ಬೆಳೆಗಳಿಗೆ ನಿರು ಕೊಡುವುದು.
16. ಒಟ್ಟಾರೆ ಸಮಗ್ರ ಕೃಷಿಯಿಂದ ವರ್ಷಕ್ಕೆ ರೂ. 12,23,300 ಸಂಪಾದಿಸಿ ರೈತ ಸಮುದಾಯಕ್ಕೆ ಮಾದರಿ ಹೆಣ್ಣು.